
# ಭಾವನೆಗಳ ಮಳೆ ಸುರಿದು ತಿಳಿಗೊಂಡ ಮನದ ಮುಗಿಲು



ಜುಹೂವಿನ ಮಹೇಶ್ ಲಂಚ್ ಹೋಂಗೆ ಬೃಂದಾ ರಾಠೋಡ್ ಅನ್ನು ರಾತ್ರಿ ಊಟಕ್ಕೆ ಆಹ್ವಾನಿಸಿದ್ದ ಆಸ್ಕರ್ ವೈಲ್ಡ್. ನಿಗದಿತ ಸಮಯಕ್ಕಿಂತ ಮುಂಚೆಯೇ ಹೋಟೆಲ್ ಪ್ರವೇಶಿಸಿದ್ದಳು ಬೃಂದಾ. 'ಬಸ್ ಬೇಗ ಬಂದಿದ್ದರಿಂದ ಕಾಲು ಗಂಟೆ ಮುಂಚಿತವಾಗಿಯೇ ಬಂದುಬಿಟ್ಟೆ' ಅವನನ್ನು ನೋಡಿ ನಗುತ್ತಾ ಹೇಳಿದ್ದಳು.

'ನನ್ನ ಪುಣ್ಯ, ನೀವು ಬರುವ ಬಗ್ಗೆ ಅನುಮಾನವಿತ್ತು ನನಗೆ' ಎಂದು ಅವಳ ಎದುರು ಕುಳಿತಿದ್ದ ನಗುತ್ತಾ.

'ನಂಬಿಕೆ ಮನುಷ್ಯನ ಬಹುದೊಡ್ಡ ಆಭರಣವೇ ಆಗಬೇಕು. ಆದರೆ ಕೆಲವೊಮ್ಮೆ ಕೆಲವು ವಿಷಯಗಳನ್ನು ಮುಚ್ಚಿಡಬೇಕಾಗುತ್ತದೆ ಅನಿವಾರ್ಯವಾಗಿ. ನಾನು ಡ್ಯಾನ್ಸ್ ಬಾರ್‌ಗೆ ಹೋಗುವುದು ಮನೆಯಲ್ಲಿರುವ ಅಮ್ಮನಿಗಾಗಲೀ, ಆಸ್ಪತ್ರೆಯಲ್ಲಿರುವ ಅಪ್ಪನಿಗಾಗಲೀ ತಿಳಿದಿಲ್ಲ.'

'ಏನಾದರೂ ಕುಡಿಯುತ್ತೀರಾ?' ನಗುತ್ತಾ ಕೇಳಿದ್ದ.

'ಅಂದರೆ' ಅವನ ಮಾತಿನ ಒಳಾರ್ಥ ಗೊತ್ತಾಗಿದ್ದರೂ ಕೇಳಿದಳವಳು.

'ವೈನ್, ಬಿಯರ್'

'ಇಲ್ಲ, ನನಗೆ ರೂಢಿಯಿಲ್ಲ. ಸಾಮಾನ್ಯವಾಗಿ ಡ್ಯಾನ್ಸ್ ಬಾರ್‌ಗಳಲ್ಲಿ ಕೆಲಸ ಮಾಡುವ ಬಹುತೇಕ ಹುಡುಗಿಯರು, ಯುವತಿಯರು, ಹೆಂಗಸರು ಕುಡಿಯುತ್ತಾರೆ. ಖುಷಿಯಾದಾಗ, ದುಃಖವಾದಾಗ ಗಂಡು, ಹೆಣ್ಣೆಂಬ ಭೇದವಿಲ್ಲದೆ ಕುಡಿಯುತ್ತಾರಂತೆ. ಇದು ಕೈಗಾರಿಕಾ ಕ್ರಾಂತಿಯ ಕೂಸುಗಳಲ್ಲಿ ಒಂದು. ಕಾರ್ಮಿಕರು ತಮ್ಮ ದಣಿವನ್ನು ಆರಿಸಿಕೊಳ್ಳಲು ವೋಡ್ಕ ಕುಡಿಯುತ್ತಿದ್ದ ಸಂಗತಿಗಳನ್ನು ನಾನು ರಷ್ಯಾದ ಕ್ರಾಂತಿಯ ಚರಿತ್ರೆಯ ಪುಟಗಳಲ್ಲಿ ಓದಿದ್ದೇನೆ. ನೀವು ಕುಡಿಯುವುದಕ್ಕೆ ನನ್ನ ಅಭ್ಯಂತರವಿಲ್ಲ' ಅವಳ ಮಾತುಗಳಿಂದ ಅವನಿಗೆ ಖುಷಿಯಾಗಿತ್ತು.

'ಕಂಪನಿಯಿದ್ದರೆ ನಾನು ಅಪರೂಪಕ್ಕೆ ವೈನ್ ಕುಡಿಯುತ್ತೇನೆ. ಇಂದು ನಿಮ್ಮ ಜೊತೆ ಫ್ರೆಶ್ ಫ್ರೂಟ್ ಜ್ಯೂಸ್ ಜೊತೆ ಊಟ ಮಾಡುತ್ತೇನೆ' ಎಂದವನಿಗೆ ಇದೇ ಹೋಟೆಲ್‌ನಲ್ಲಿ ಸುಮಾರು ದಿನಗಳ ಹಿಂದೆ ಪೂರ್ವಿಕಾ ದೇಶಪಾಂಡೆಯ ಜೊತೆ ವೈನ್ ಕುಡಿದಿದ್ದು ನೆನಪಾಗಿತ್ತು. ಅಂದು ಬಿಯರ್ ಕುಡಿಯುತ್ತಾ ಪೂರ್ವಿಕಾ ಕಂಪನಿ ಕೊಟ್ಟಾಗ ಮನಸ್ಸು ತುಂಬಾ ಮುದಗೊಂಡಿತ್ತು. ಆದರೆ ಲಾಸ್ ವೇಗಾಸ್‌ನಲ್ಲಿ ನಡೆದ ಘಟನೆಗಳು ಆ ಕ್ಷಣಕ್ಕೆ ಅಪಾರವಾದ ಖುಷಿ ನೀಡಿದ್ದರೂ ಕ್ರಮೇಣ ಮನಸ್ಸನ್ನು ಗಾಸಿಗೊಳಿಸಿದ್ದವು. ಪರಿಮಿತಿಗಳನ್ನು ದಾಟುವಾಗ ಕ್ಷಣದ ಖುಷಿ ಸಿಕ್ಕರೂ ಕ್ರಮೇಣ ಪರಿಮಿತಿಗಳನ್ನು ದಾಟಿದ ಬಗ್ಗೆ ವಿಷಾದವೂ, ಬೇಸರವೂ ಉಂಟಾಗುವುದು ಮನುಷ್ಯನಲ್ಲಿ ಅಡಗಿರುವ ವಿಚಿತ್ರ ಗುಣ. ಫ್ರೆಶ್ ಲೆಮನ್ ಜ್ಯೂಸ್ ಜೊತೆ ತಮಗೆ ಬೇಕಾದ ಊಟವನ್ನು ಆರ್ಡರ್ ಮಾಡಿದ್ದರು.

'ನಿಮ್ಮ ತಂದೆಯವರ ಸರ್ಜರಿಗೆ ಎಷ್ಟು ಹಣ ಬೇಕಾಗಬಹುದು?' ಕೇಳಿದ್ದ ವೈಲ್ಡ್.

'ಹತ್ತಿರ ಹತ್ತಿರ ನಲವತ್ತು ಲಕ್ಷ ಆಗುತ್ತದೆಂದು ಹೇಳಿದ್ದಾರೆ. ಅಷ್ಟು ಹಣವನ್ನು ಕಂಪನಿಯವರು ಶಸ್ತ್ರಚಿಕಿತ್ಸೆಗೆ ಕೊಡುವುದಿಲ್ಲವೆಂದು ಹೇಳಿಬಿಟ್ಟರು. ಏಕೆಂದರೆ ಅಪ್ಪ ಕಾರ್ಮಿಕ ಮುಖಂಡರಾಗಿದ್ದವರು. ಎಷ್ಟೋ ಸಾರಿ ಚಳವಳಿಗೆ ಕರೆಕೊಟ್ಟು ಉತ್ಪಾದನಾ ನಷ್ಟಕ್ಕೆ ಕಾರಣವಾಯಿತೆಂದು ಅಪ್ಪನ ಮೇಲೆ ಕೇಸುಗಳನ್ನೂ ಹಾಕಿದ್ದಾರೆ. ಇನ್ನು ಇನ್ಶೂರೆನ್ಸ್ ಹಣ ಮ್ಯಾಕ್ಸಿಮಮ್ ಹತ್ತು ಲಕ್ಷವಷ್ಟೇ ಕವರ್ ಆಗುವುದಂತೆ. ಹಾಗಾಗಿ ಶಸ್ತ್ರಚಿಕಿತ್ಸೆಯ ಸಂಗತಿಯನ್ನು ಕೈಬಿಟ್ಟಿದ್ದೇವೆ. ಇಪ್ಪತ್ತು ದಿನ ನೋಡಿ ಡಿಸ್ಚಾರ್ಜ್ ಮಾಡಿಸಿಕೊಂಡು ಹೋಗುತ್ತೇವೆ. ಇರುವಷ್ಟು ದಿನ ಇರಲಿ. ನಾನು ಈ ಮೊದಲೇ ಹೇಳಿದೆನಲ್ಲ, ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸರ್ಕಾರಗಳು ತಮ್ಮ ಪ್ರಜೆಗಳಿಗೆ ಸರಿಯಾದ ಸಾರ್ವಜನಿಕ ವೈದ್ಯಕೀಯ ಮತ್ತು ಶಿಕ್ಷಣ ಸೌಲಭ್ಯಗಳನ್ನು ಒದಗಿಸಿದರೆ ಸಾಕು, ಪ್ರಜೆಗಳ ಮುಕ್ಕಾಲು ಪಾಲು ಕಷ್ಟಗಳು ನೀಗಿದಂತೆಯೇ. ಅಪ್ಪ ಕೂಡ ಬದುಕಿಗೆ ವಿದಾಯ ಹೇಳಲು ಸಿದ್ಧರಿದ್ದಾರೆ. ಅಪ್ಪ ಕಾರ್ಮಿಕರಿಗಾಗಿ ಹಗಲು, ರಾತ್ರಿ ಎನ್ನದೆ ಹೋರಾಡಿದ. ಜೊತೆಗೆ ಕುಡಿತದ ಚಟವೂ ಇತ್ತು. ಹಾಗಾಗಿ ನಿವೃತ್ತಿಗೆ ಇನ್ನೂ ಒಂದು ವರ್ಷ ಇರುವಂತೆಯೇ ಇಂಥ ಸ್ಥಿತಿಗೆ ತಲುಪಿದ', ಅವಳ ಮಾತುಗಳು ಕೊನೆ ಕೊನೆಗೆ ಸೊರಗಿದ್ದವು.

'ನಿಮ್ಮ ಅಪ್ಪನ ಶಸ್ತ್ರಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳಿ, ಅದಕ್ಕೆ ಬೇಕಾಗುವ ಹಣವನ್ನು ನಾನು ವ್ಯವಸ್ಥೆ ಮಾಡಿಕೊಡುತ್ತೇನೆ. ಇಂಥ ಸಮಯದಲ್ಲಿ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಾರದು.'

